# ನಿರ್ಣಾಯಕ ಹಾಗೂ ಉದಯೋನ್ಮುಖ ತಂತ್ರಜ್ಞಾನ (ಐಸಿಇಟಿ)- ಭಾರತ -ಅಮೆರಿಕ ಉಪಕ್ರಮಕ್ಕೆ ಸಂಬಂಧಿಸಿದ ಪರಿಶೀಲನಾ ಸಭೆ

ಜೂನ್ 18, 2024

ಭಾರತದ ರಾಷ್ಟ್ರೀಯ ಭದ್ರತಾ ಸಲಹೆಗಾರ (NSA) ಶ್ರೀ ಅಜಿತ್ ದೋವಲ್ ಮತ್ತು ಅಮೆರಿಕದ ರಾಷ್ಟ್ರೀಯ ಭದ್ರತಾ ಸಲಹೆಗಾರ (APNSA) ಗೌರವಾನ್ವಿತ ಶ್ರೀ ಜೇಕ್ ಸುಲ್ಲಿವಾನ್ ಅವರು 2024ರ ಜೂನ್ 17ರಂದು ನವದೆಹಲಿಯ ಹೈದರಾಬಾದ್ ಹೌಸ್‌ನಲ್ಲಿ 'ನಿರ್ಣಾಯಕ ಮತ್ತು ಉದಯೋನ್ಮುಖ ತಂತ್ರಜ್ಞಾನ' (iCET) ಕುರಿತ ಉಪಕ್ರಮದ ಪರಿಶೀಲನಾ ಸಭೆಯ ಅಧ್ಯಕ್ಷತೆಯನ್ನು ವಹಿಸಿದ್ದರು. ಬಾಹ್ಯಾಕಾಶ, ಸೆಮಿಕಂಡಕ್ಟರ್‌ಗಳು, ಸುಧಾರಿತ ದೂರಸಂಪರ್ಕ, ಕೃತಕ ಬುದ್ಧಿಮತ್ತೆ, ಕ್ವಾಂಟಮ್, ಎಸ್ಟಿಇಎಂ, ಜೈವಿಕ ತಂತ್ರಜ್ಞಾನ, ಕ್ರಿಟಿಕಲ್ ಮಿನರಲ್ಸ್ ಮತ್ತು ಶುದ್ಧ ಇಂಧನ ಸೇರಿದಂತೆ ಪ್ರಮುಖ ತಂತ್ರಜ್ಞಾನ ಕ್ಷೇತ್ರಗಳಲ್ಲಿ ಕಾರ್ಯತಂತ್ರದ ಸಹಕಾರವನ್ನು ಗಾಢವಾಗಿಸಲು ಮತ್ತು ವಿಸ್ತರಿಸಲು ಭಾರತ ಮತ್ತು ಅಮೆರಿಕ ಕೈಗೊಂಡ ಮಹತ್ವದ ಪ್ರಗತಿಯನ್ನು ಅವರು ಪರಿಶೀಲಿಸಿದರು.

ಭಾರತದಿಂದ ಭಾಗವಹಿಸಿದವರಲ್ಲಿ ಪ್ರಧಾನ ವೈಜ್ಞಾನಿಕ ಸಲಹೆಗಾರ, ಕಾರ್ಯತಂತ್ರ ವ್ಯವಹಾರಗಳ ಉಪ ರಾಷ್ಟ್ರೀಯ ಭದ್ರತಾ ಸಲಹೆಗಾರ, ವಿದ್ಯುನ್ಮಾನ ಮತ್ತು ಮಾಹಿತಿ ತಂತ್ರಜ್ಞಾನ ಹೊಸ ಮತ್ತು ನವೀಕರಿಸಬಹುದಾದ ಇಂಧನ, ಔಷಧಿ, ಗಣಿ, ಬಾಹ್ಯಾಕಾಶ ಮತ್ತು ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವಾಲಯಗಳ ಕಾರ್ಯದರ್ಶಿಗಳು ಮತ್ತು ಉನ್ನತ ಶಿಕ್ಷಣ, ಜೈವಿಕ ತಂತ್ರಜ್ಞಾನ, ದೂರಸಂಪರ್ಕ ಮತ್ತು ವಿದೇಶಾಂಗ ವ್ಯವಹಾರಗಳ ಸಚಿವಾಲಯದ ಜಂಟಿ ಕಾರ್ಯದರ್ಶಿಗಳು ಇದ್ದರು. ಅಮೆರಿಕದಿಂದ ಭಾಗವಹಿಸಿದವರಲ್ಲಿ ಉಪ ವಿದೇಶಾಂಗ ಕಾರ್ಯದರ್ಶಿ, ರಾಷ್ಟ್ರೀಯ ವಿಜ್ಞಾನ ಪ್ರತಿಷ್ಠಾನದ ನಿರ್ದೇಶಕರು ಮತ್ತು ಅಮೆರಿಕದ ರಾಷ್ಟ್ರೀಯ ಭದ್ರತಾ ಮಂಡಳಿ, ಇಂಧನ ಇಲಾಖೆ, ನಾಸಾ, ಎನ್.ಎಸ್.ಎಫ್. ಮತ್ತು ಯು.ಎಸ್.ಎ.ಐ.ಡಿ.ಯ ಹಿರಿಯ ಪ್ರತಿನಿಧಿಗಳು ಸೇರಿದ್ದರು. ಎರಡೂ ಕಡೆಯವರು ಪರಸ್ಪರ ಸಹಯೋಗವನ್ನು ಮತ್ತಷ್ಟು ಸುಲಭಗೊಳಿಸಲು ಮತ್ತು ವ್ಯಾಪಾರ, ತಂತ್ರಜ್ಞಾನ ಮತ್ತು ಕೈಗಾರಿಕಾ ಸಹಕಾರದಲ್ಲಿನ ಅತ್ಯುತ್ತಮ ಅಡೆತಡೆಗಳನ್ನು ಪರಿಹರಿಸಲು ಇರುವ ಮುಂದಿನ ಮಾರ್ಗಗಳ ಬಗ್ಗೆ ಚರ್ಚಿಸಿದರು.

ಜಿ2ಜಿ ಐಸಿಇಟಿ ಸಭೆಯ ಜೊತೆಗೆ, ಅಜಿತ್ ದೋವಲ್ ಮತ್ತು ಜೇಕ್ ಸುಲ್ಲಿವಾನ್ ಅವರು 18 ಜೂನ್ 2024 ರಂದು ಭಾರತೀಯ ಕೈಗಾರಿಕಾ ಒಕ್ಕೂಟದ (ಸಿಐಐ) ವತಿಯಿಂದ ಕೈಗಾರಿಕಾ ದುಂಡು ಮೇಜಿನ ಸಭೆ ನಡೆಸುವ ಬಗ್ಗೆ ಪ್ರಸ್ತಾಪಿಸಿದರು. ಭಾರತ ಮತ್ತು ಅಮೆರಿಕವು ಕಾರ್ಯತಂತ್ರದ ತಂತ್ರಜ್ಞಾನ ಕ್ಷೇತ್ರಗಳಲ್ಲಿ ಖಾಸಗಿ ವಲಯದ ಹೂಡಿಕೆ ಮತ್ತು ಪಾಲುದಾರಿಕೆಯನ್ನು ಹೆಚ್ಚಿಸುವ ಪ್ರಯತ್ನದಲ್ಲಿ ಇರುವ ಹಿನ್ನೆಲೆಯಲ್ಲಿ ಸಭೆಯು ಎರಡೂ ದೇಶಗಳ ಕೈಗಾರಿಕೋದ್ಯಮದ ನಾಯಕರನ್ನು ಒಟ್ಟುಗೂಡಿಸಿದೆ. ಅಮೆರಿಕದ ಉದ್ಯಮವು ಥಾಯರ್ ಮಹನ್, ಜನರಲ್ ಅಟೊಮಿಕ್ಸ್, ಜೆಹ್ ಏರೋಸ್ಪೇಸ್, ಹೋಲ್ಟೆಕ್, ಕಮ್ಮಿನ್ಸ್, ಅಲ್ಸಿಮ್ ಎನರ್ಜಿ ಮತ್ತು ಆಕ್ಸಿಯಮ್ ಸ್ಪೇಸ್‌ನಿಂದ ಪ್ರಾತಿನಿಧ್ಯವನ್ನು ಹೊಂದಿತ್ತು. 3rdiTech, ಬಿಎಚ್‌ಇಎಲ್, ಭಾರತ್ ಫೋರ್ಜ್, ಭಾರ್ತಿ ಏರ್ಟೆಲ್, ಭುಖನವಾಲಾ ಇಂಡಸ್ಟ್ರೀಸ್, ಸೆಂಟಮ್ ಎಲೆಕ್ಟ್ರಾನಿಕ್ಸ್, ಎಲ್ & ಟಿ, ಟಾಟಾ ಅಡ್ವಾನ್ಸ್ಡ್ ಸಿಸ್ಟಮ್ಸ್, ಟಾಟಾ ಪವರ್ ಮತ್ತು ತೇಜಸ್ ನೆಟ್ವರ್ಕ್‌ನ ಪ್ರತಿನಿಧಿಗಳು ಭಾರತೀಯ ಉದ್ಯಮದ ನಾಯಕರಾಗಿದ್ದಾರೆ. ದ್ವಿಪಕ್ಷೀಯ ಸಹಯೋಗ, ಸಹಯೋಗವನ್ನು ಹೇಗೆ

ಮುಂದುವರಿಸಿಕೊಂಡು ಹೋಗಬಹುದು ಎನ್ನುವ ಬಗ್ಗೆ ಅವರ ದೃಷ್ಟಿಕೋನ, ಸಹಯೋಗಕ್ಕೆ ಅಡ್ಡಿಯಾಗದೆ ನಿರ್ದಿಷ್ಟ ಸಮಸ್ಯೆಗಳನ್ನು ಪರಿಹರಿಸಿಕೊಳ್ಳುವ ನಿಟ್ಟಿನಲ್ಲಿ ಸರ್ಕಾರದ ಸೌಲಭ್ಯಗಳು ಪ್ರಮುಖ ಪಾತ್ರ ವಹಿಸಬಲ್ಲ ಕ್ಷೇತ್ರಗಳನ್ನು ಗುರುತಿಸುವ ವಿಷಯದಲ್ಲಿ ಈ ಉದ್ಯಮಗಳು NSAಗಳಿಗೆ ಹೆಚ್ಚಿನ ತಿಳುವಳಿಕೆಯನ್ನು ನೀಡಿತು.

**ನವದೆಹಲಿ**
**ಜೂನ್ 18, 2024**